**ದಿನಾಂಕಃ 30.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

9. ನನ್ನ ತಂದೆಯ ಹೆಸರು ಕರುಡಾಬೋವಿ. ನನ್ನ ತಂದೆ ವಾದಿಯ ವಿರುದ್ದ ಅವರ ಜೀವಿತಾ ಕಾಲದಲ್ಲಿ ಒಂದು ದಾವೆ ಹಾಕಿದ್ದರು. ಖಾತಾ ನಂ.83/84 ರ ಮೇಲೆ ದಾವೆ ಹಾಕಿದ್ದರು. ನನಗೆ ದಾವೆಯ ಸಂಖ್ಯೆ ಗೊತ್ತಿರುವುದಿಲ್ಲ ಅದು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ಓ ಎಸ್ ಸಂಖ್ಯೆ 210/2000 ಎಂಬ ದಾವೆಯನ್ನು ಹಾಕಿದ್ದು ಅದರಲ್ಲಿ ಖಾನೇಷುಮಾರಿ ನಂ.99 ಪೂರ್ವ ಪಶ್ಚಿಮ 4 ಗಜ ಉತ್ತರ ದಕ್ಷಿಣ 25 ಗಜ ಎಂಬಂತೆ ವಡ್ಡರದೊಡ್ಡಿ ಕಲ್ಲಹಳ್ಳಿ ಗ್ರಾಮ ಪಂಚಾಯತಿಗೆ ಸೇರಿರುವಂತೆ ಹಾಕಿದ್ದರು ಎಂದರೆ ಸರಿ. ಅದರಲ್ಲಿ ನಾನು ನನ್ನ ತಂದೆ ಮನೆ ಮಾಡಿಕೊಂಡು ಸ್ವಾಧೀನದಲ್ಲಿದ್ದೇವು. ಸದರಿ ದಾವೆಯಲ್ಲಿ ನನ್ನ ತಂದೆ ಸುಳ್ಳು ಚಕ್ಕುಬಂದಿಯನ್ನು ತೋರಿಸಿ ಡಿಕ್ರಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ.

10. ಸದರಿ ಸ್ವತ್ತಿನ ಪೂರ್ವಕ್ಕೆ ಗೋಪಾಲಬೋವಿ ರವರ ಸ್ವತ್ತು ಇರುತ್ತದೆಂದರೆ ಸರಿಯಲ್ಲ. ನನ್ನ ತಂದೆ ಚಕ್ಕುಬಂದಿಯನ್ನು ತೋರಿಸುವಾಗ ವಾದಿಯ ಮನೆಯ ಪಕ್ಕದಲ್ಲಿರುವ ರಾಮಾಬೋವಿ ರವರ ಚಕ್ಕುಬಂದಿ ಪೂರ್ವಕ್ಕೆ ತೋರಿಸಿದ್ದು ಆದರೆ ಅಲ್ಲಿ ವಾದಿ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ನಮಗೆ 2 ಸ್ವತ್ತುಗಳಿದ್ದು ಅದರಂತೆ ಚಕ್ಕುಬಂದಿಯನ್ನು ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ಸದರಿ ಖಾನೇಷಮಾರಿ ಸಂಖ್ಯೆ 99 ಬೇರೆ ದಾವಾ ಸ್ವತ್ತು ಬೇರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ ಚಕ್ಕುಬಂದಿ ಸರಿಯಾಗಿರುತ್ತದೆಂದು ನುಡಿಯುತ್ತಾರೆ. ದಾವಾ ಸ್ವತ್ತು ಖಾನೇಷುಮಾರಿ ಸಂಖ್ಯೆ 7/183 ಕ್ಕೆ ಹಾಕಿರುತ್ತಾರೆಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಹಾಗಾಗಿ ಖಾನೇಷುಮಾರಿ 99 ಹಾಗೂ 7/183 ಬೇರೆ ಬೇರೆ ಎಂದರೆ ಸರಿ.

11. ನಾನು ಪ್ರಸ್ತುತ ಸಾಕ್ಷಿ ವಿಚಾರಣೆಯಲ್ಲಿ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ಅದರಲ್ಲಿ ಮಿಸ್ ಸಂಖ್ಯೆ 1/99 ಎಂಬ ದಾಖಲಾತಿ ನೀಡಿರುತ್ತೇನಾ

ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಡಿ-8 ಮತ್ತು 9 ಕ್ಕೂ ಪ್ರಸ್ತುತ ದಾವೆಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹಿತ ಸುಳ್ಳು ದಾಖಲಾತಿಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ನನ್ನ ತಂದೆಯ ವಿರುದ್ದ ದಾವೆ ಹಾಕಿದ್ದು ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಯಾವ ಕಾರಣಕ್ಕೆ ಅವರು ದಾವೆ ಯಾವ ಸ್ವತ್ತಿನ ಮೇಲೆ ಹಾಕಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

12. ನಿಡಿ-3 ರಲ್ಲಿ ಅಂದರೆ ಋಣಭಾರ ಪತ್ರದಲ್ಲಿ ಖಾನೇಷುಮಾರಿ ಸಂಖ್ಯೆ 127/118/127 ಎಂದು ನಮೂದಾಗಿದೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ದಾಖಲಾತಿಗಳಿಗೂ ಪ್ರಸ್ತುತ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹಿತ ಅವುಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**